## ಕಥೋಪದೇಶ



# ಬಹುಜನ ಹಿತಾಯ ಬಹುಜನ ಸುಖಾಯ

**ಕಲೆ** : ಜೆ.ಸಿ. ಸಿದ್ದಲಿಂಗಯ್ಯ

**ಸಂಗ್ರಹ** : ಎಲ್.ಎಸ್. ಹೆಗಡೆ ಪುಟ್ಟನಮನೆ, ಶಿರಸಿ



ಭಗವಾನ್ ಬುದ್ಧದೇವನು ತನ್ನ ಬಳಿ ಬಂದಿದ್ದ ಭಿಕ್ಷುಗಳನ್ನು ಕುರಿತು ಲೋಕಹಿತಕ್ಕಾಗಿ ತಮ್ಮನ್ನು ಅರ್ಪಿಸಿಕೊಳ್ಳುವಂತೆ ಉಪದೇಶ ನೀಡಿದನು. ಧರ್ಮದೀಕ್ಷೆಗಾಗಿ ಅವರೆಲ್ಲ ಬಂದಿದ್ದರು. ಬಂದಿದ್ದ ಭಿಕ್ಷುಗಳೆಲ್ಲ ಅನಂತರ ಬೇರೆ ಬೇರೆ ಕಡೆ ಧರ್ಮಪ್ರಸಾರಕ್ಕಾಗಿ ಹೊರಟುಬಿಟ್ಟರು. ದೇವವರ್ಧನ ಎಂಬ ಭಿಕ್ಷುವು ತಾನು ಹೋಗಬೇಕೆಂದಿರುವ ಸ್ಥಳವನ್ನು ಭಗವಾನ್ ಬುದ್ಧನಿಗೆ ತಿಳಿಸಲು, ಬಳಿಗೆ ಬಂದು ಅತ್ಯಂತ ವಿನಯದಿಂದ, "ಭಗವನ್, ನಾನು ಕಳಿಂಗದೇಶಕ್ಕೆ ಹೋಗಿ ಧರ್ಮದ ಪ್ರಚಾರ ಮಾಡಲು ಬಯಸುತ್ತೇನೆ" ಎಂದನು. ಕಳಿಂಗದ ಹೆಸರು ಕೇಳಿದೊಡನೆಯೇ ಭಗವಾನ್ ಬುದ್ಧನು ಕಣ್ಣು ಬಿಟ್ಟು ದೇವವರ್ಧನನನ್ನು ಕುರಿತು ಅತ್ಯಂತ ಪ್ರೀತಿಯಿಂದ "ವತ್ಸ! ಅಲ್ಲಿಯ ಜನ ಬಹಳ ದುಷ್ಟರು. ಅವರು ನಿನ್ನ ಮೇಲೆ ಇಲ್ಲಸಲ್ಲದ ಆರೋಪ ಹೊರಿಸಿ ನಿನಗೆ ಬಹಳ ತೊಂದರೆ ಕೊಡುವರು, ಬಯ್ಯುವರು. ಆದ್ದರಿಂದ ಅಲ್ಲಿಗೆ ಹೋಗುವ ಆಸೆಯನ್ನು ಬಿಡು" ಎಂದನು. ಭಿಕ್ಷುವು ಮೊದಲಿನಂತೆಯೇ ವಿನಯದೊಂದಿಗೆ ಹೇಳಿದ, "ಭಗವನ್, ಬಯ್ದರೇನಂತೆ ಹೊಡೆಯುವುದಿಲ್ಲವಲ್ಲ!" ಆಗ ಬುದ್ಧ "ತಮ್ಮ, ಅವರು ದುರಾಚಾರಿಗಳೆಂಬುದರಲ್ಲಿ ಸಂದೇಹವೇ ಇಲ್ಲ ಅವರು ನಿನ್ನನ್ನು ಹೊಡೆಯಲೂಬಹುದು" ಎಂದನು. ಆದರೆ ದೇವವರ್ಧನನು ವಿಚಲಿತನಾಗದೆ, "ದೇವಾ, ಹೊಡೆದರೇನಂತೆ, ಸ್ವಲ್ಪ ಸಹಿಸಿಕೊಂಡರಾಯಿತು. ಅವರು ನನ್ನ ಪ್ರಾಣ ತೆಗೆಯುವುದಿಲ್ಲವಲ್ಲ!" ಎಂದನು. ಆಗ ಬುದ್ಧನು, "ಆದರೆ ಅವರು ನಿನ್ನನ್ನು ಕೊಲ್ಲಲೂಬಹುದು, ದೇವವರ್ಧನ! ನಾನು ಅವರ ನಿರ್ದಯತೆಯನ್ನು ನೋಡಿದ್ದೇನೆ" ಎಂದನು. ಅದಕ್ಕೆ ದೇವವರ್ಧನನು "ಭಗವನ್, ತಾವೇ ಹೇಳಿದ್ದೀರಿ, ಈ ಶರೀರ ಧರ್ಮಕಾರ್ಯದಲ್ಲಿ ನಶಿಸಿದರೆ ಅದು ಒಳ್ಳೆಯದೇ ಎಂದು. ಈ ರೀತಿಯಿಂದ ಆ ಜನರು ನನಗೆ ಉಪಕಾರವನ್ನೇ ಮಾಡುವರು" ಎಂದನು.

ದೇವವರ್ಧನನ ಮಾತಿನಿಂದ ಭಗವಾನ್ ಬುದ್ಧ ಅತ್ಯಂತ ಸಂತುಷ್ಟನಾಗಿ, ಅವನನ್ನು ಆಶೀರ್ವದಿಸಿ ಬೀಳ್ಕೊಡುತ್ತಾ—"ವತ್ಸ! ಧರ್ಮಪ್ರಚಾರಕನ ನಿಜವಾದ ಯೋಗ್ಯತೆ ನಿನ್ನಲ್ಲಿದೆ. ನೀನು ನಿಶ್ಚಯವಾಗಿಯೂ ಅಲ್ಲಿ ಧರ್ಮಬೋಧೆಯನ್ನು ಮಾಡಲು ಅರ್ಹ. ಧರ್ಮಬೋಧಕನಿಗೆ ಅವಶ್ಯಕವಾಗಿ ಇರಬೇಕಾದುದು ಸಹಿಷ್ಣುತೆ, ಕ್ಷಮೆ, ಮತ್ತು ನಿಷ್ಠೆ. ಅಂತಹವನು ಮಾತ್ರವೇ ಸರ್ವರಿಗೂ ಹಿತವನ್ನುಂಟುಮಾಡಲು ಸಮರ್ಥ."